1990-91

1) ಜಾಮಿಯಾ ಮಾಸ್ಕ್,ನಾಗವಲ್ಲಿ, ಸಿ.ಆರ್.ನಗರ	10,000/
2) ಮಾಸ್ಕ್,ಕಗಲವಾಡಿ, ಸಿ.ಆರ್.ನಗರ	10,000/
3) ಜಾಮಿಯಾ ಮಸ್ಜಿದ್, ಚಂದಕವಾಡಿ, ಸಿ.ಆರ್.ನಗರ	10,000/
4) ಮಾಸ್ಕ್, ಹುರಗನೂರ್, ಸಿ.ಆರ್.ನಗರ	10,000/
5) ಮಾಸ್ಕ್, ಕಿರಗಸೂರ್,	10,000/

ಇ) 1991-92ನೇ ಸಾಲಿನಲ್ಲಿ ಈವರೆಗೆ ಯಾವುದೇ ಮನವಿಗಳು ಬಂದಿರುವುದಿಲ್ಲ.

ರಾಜ್ಯದಲ್ಲಿ ಸೀಮೆಎಣ್ಣೆ ವಿತರಣೆ ಬಗ್ಗೆ

2761 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೀಮೆಎಣ್ಣೆ ವಿತರಣೆ ಸರಿಯಾಗಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ, ವಿತರಣೆ ಮಾಡುತ್ತಿರುವ ವ್ಯವಸ್ಥೆಯೂ ಸಮರ್ಪಕವಾಗಿರುವುದೇ ಹಾಗೂ ಪ್ರಸ್ತುತ ವಿತರಣೆಯ ರೀತಿ ನೀತಿಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು

ಆ) ಈಗಿನ ವಿತರಣಾ ವ್ಯವಸ್ಥೆಯನ್ನು ಸುಧಾರಿಸಬೇಕಾಗಿದೆ. ಸೀಮೆಎಣ್ಣೆಯನ್ನು ರಾಜ್ಯದಲ್ಲಿ ಪಡಿತರ ಚೀಟಿಗಳ ಮೇಲೆ ಹಂಚಲಾಗುತ್ತಿದೆ. ರಾಜ್ಯದ ಅವಶ್ಯಕತೆ ಹಾಗೂ ಕೇಂದ್ರದ ಹಂಚಿಕೆಯನ್ನು ಆಧಾರಿಸಿ ಹೊಸ ವಿತರಣಾ ನೀತಿಯನ್ನು ರೂಪಿಸಲಾಗುತ್ತಿದೆ.

ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು ಪಡೆದಿರುವ ಬಗ್ಗೆ

2794 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ವಿದ್ಯುತ್ ಯೋಜನೆಗಳ ಬಗ್ಗೆ ನೆರವು ಪಡೆಯಲು ವಿಶ್ವಬ್ಯಾಂಕ್ ಜೊತೆ ಚರ್ಚೆ ನಡೆಸಲಾಗಿರುವುದೇ?

ಆ) ಹಾಗಿದ್ದಲ್ಲಿ ಅವುಗಳ ವಿವರಗಳನ್ನು ನೀಡುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಕಾಳಿ ವಿದ್ಯುತ್ ಯೋಜನ ಹಂತ-2 ಮತ್ತು ಶರಾವತಿ ಕೆಳ ಪ್ರವಾಹ ವಿದ್ಯುತ್ ಯೋಜನೆ ಇವುಗಳನ್ನು ವಿಶ್ವ ಬ್ಯಾಂಕಿನ ಆರ್ಥಿಕ ಸಹಾಯದಿಂದ ಕಾರ್ಯಗತ ಮಾಡಲಾಗುತ್ತಿದೆ. ಈ ಯೋಜನೆಗಳ ಸ್ಥಾಪನೆಯ ಪ್ರಗತಿಯನ್ನು ಪರಿವೀಕ್ಷಿಸಲು ವಿಶ್ವಬ್ಯಾಂಕಿನಿಂದ ನೇಮಿಸಲ್ಪಟ್ಟ ಉಸ್ತುವಾರಿ ಮಿಷನ್ ಜುಲೈ ತಿಂಗಳ ದಿನಾಂಕ 15 ರಿಂದ 19 ರವರೆಗೆ ರಾಜ್ಯಕ್ಕೆ ಭೇಟಿ ಇತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ರಾಜ್ಯ ಸರ್ಕಾರದ

ಅಧಿಕಾರಿಗಳು ಮತ್ತು ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಡೆಸಿದ ಸಭೆಯಲ್ಲಿ ಚರ್ಚೆ ನಡೆಸಿತು.

ಸರ್ಕಾರದ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಬಗ್ಗೆ

2853 - ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) ; ಮಾನ್ಯ ಶಿಕ್ಷಣ ಮತ್ತ ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಕೆಲವು ಕಾಲೇಜುಗಳಿಗೆ ಸ್ವಯತ್ತತೆ ನೀಡುವ ಬಗ್ಗೆ ಯೋಜಿಸಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳ ವಿವರಗಳನ್ನು ನೀಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು

ಆ) ವಿಶ್ವವಿದ್ಯಾಲಯಗಳನ್ನು, ಯು.ಜಿ.ಸಿ. ಮಾರ್ಗ ಸೂಚಿಯನ್ನು ಅನುಸರಿಸಿ ಪರಿಷ್ಕೃತ ಕರಡು ಶಾಸನ ರೂಪಿಸಿ ಕುಲಪತಿಗಳ ಒಪ್ಪಿಗೆಗಾಗಿ ಕಳುಹಿಸುವಂತೆ ಕೋರಲಾಗಿದೆ.

ಕಾಲೇಜುಗಳಲ್ಲಿ ಪ್ರವೇಶದ ತೊಂದರೆ ಆಗಿರುವುದರ ಬಗ್ಗೆ

2820 - ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಬಾರಿ ಕಾಲೇಜುಗಳಲ್ಲಿ ಪ್ರವೇಶ ಸಿಗದೇ ಓದು ನಿಲ್ಲಿಸಿರುವ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಆ) ಅವರುಗಳಿಗೆ ಯಾವ ಸಾಲಿಗೆ ಪ್ರವೇಸ ದೊರಕಿಸಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪಿಯುಸಿ ತರಗತಿಗೆ ಸೇರ ಬಯಸುವ ಎಲ್ಲಾ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತೆ ಸರ್ಕಾರಿ ಕಾಲೇಜಿನ ಎಲ್ಲಾ ಪ್ರಾಚಾರ್ಯರುಗಳಿಗೆ ಹಾಗೂ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಕೂಡಾ ಸೂಕ್ತ ಆದೇಶ ನೀಡಲಾಗಿದೆ ಮತ್ತು ಪ್ರವೇಶ ದೊರಕಿಸಿಕೊಡಲು ಅವಕಾಶ ಮಾಡಿಕೊಡಲಾಗಿದೆ.

ಆ) 1991-92ನೇ ಸಾಲಿಗೆ ಪ್ರವೇಶ ದೊರಕಿಸಲಾಗುವುದು.

ರಾಜ್ಯದ ಬಿ.ಎಡ್. ಕಾಲೇಜುಗಳ ಸಂಖ್ಯೆ ಬಗ್ಗೆ

2821 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಒಟ್ಟು ಬಿ.ಎಡ್. ಕಾಲೇಜುಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ?